9. ಶ್ರೀ ಚಂದ್ರಕುಮಾರ್, ಮಡಬಾಳ ಗ್ರಾಮ ಮತ್ತು ಹೋಬಳಿ, ಮಾಗಡಿ ತಾಲೋಕು. ಸದಸ್ಯರು

10. ಶ್ರೀ ರಾಜ್, ಹಂಪಾಪುರ ಗ್ರಾಮ, ಮಾಗಡಿ ತಾಲೋಕು. ಸದಸ್ಯರು

11. ಶ್ರೀ ಪಾಪಣ್ಣ, ವಕೀಲರು, ಬಸ್ ನಿಲ್ದಾಣದ ಹತ್ತಿರ ಮಾಗಡಿ ಸದಸ್ಯರು

12. ಶ್ರೀ ಮಲ್ಲಿಕಾರ್ಜುನಯ್ಯ, ವಕೀಲರು, ಮುಖ್ಯರಸ್ತೆ, ಮಾಗಡಿ ಸದಸ್ಯರು

13. ಶ್ರೀಮತಿ ಸುಶೀಲಮ್ಮ, ಮಡಬಾಳ ಗ್ರಾಮ ಮತ್ತು ಹೋಬಳಿ, ಮಾಗಡಿ ತಾಲೋಕು. ಸದಸ್ಯರು

14. ಶ್ರೀ ಹೆಚ್.ಎಸ್.ಸುರೇಂದ್ರ, ನಂ. 1340, ಬಿ.ಕೆ.ರಸ್ತೆ, ಮಾಗಡಿ ಸದಸ್ಯರು

15. ಶ್ರೀ ಎಸ್.ಆರ್.ಪ್ರಕಾಶ್, ಸಂಕೇಘಟ್ಟ ಗ್ರಾಮ, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲೋಕು. ಸದಸ್ಯರು

ಜೆ.ಎಂ.ಎಫ್.ಸಿ. ನ್ಯಾಯಾಲಯದ ಸಹಾಯಕ ಸರ್ಕಾರಿ ಅಭಿಯೋಜಕರು, ಮಾಗಡಿ ಕಾನೂನು ನೆರವು ಮಂಡಳಿಯ ಕಾರ್ಯದರ್ಶಿಯವರಾಗಿರುತ್ತಾರೆ.

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ಕೆಂಪೇಗೌಡ ಉತ್ಸವ ಆಚರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 601 (1276)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ):- ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನಲ್ಲಿ ಕೆಂಪೇಗೌಡ ಉತ್ಸವವನ್ನು ಪ್ರತಿವರ್ಷ ಆಚರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- 95-96ರಲ್ಲಿ ಕೈಗೊಂಡ ಹೊಂಡ ಮುಚ್ಚುವ ಕೆಲಸದ ವಿವರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 604 (956)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದವರು ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗೋಸ್ಕರ 95-96ರ ಸಾಲಿಗೆ ಬಿಡುಗಡೆ ಮಾಡಿದ ಹಣವೆಷ್ಟು?

ಆ) ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲಾಗಿದೆ?

ಇ) 1994-95, 1995-96ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಎಷ್ಟು ರಸ್ತೆಗಳ ಅಭಿವೃದ್ಧಿ ಕಾರ್ಯಗಳು ನಡೆದಿದೆ? ಎಷ್ಟು ಬಾಕಿ ಇವೆ? ಬಾಕಿ ಇದ್ದರೆ ಕಾರಣಗಳೇನು?

ಈ) 1995-96ನೇ ಸಾಲಿನ ಹೊಂಡ ಮುಚ್ಚುವ ಮತ್ತು ತಾತ್ಕಾಲಿಕ ದುರಸ್ಥಿ ಕೆಲಸಗಳನ್ನು ಕೂಡ ಇಲಾಖೆಯವರು ಮಾಡಿ ಮುಗಿಸದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) 1995-96ನೇ ಸಾಲಿಗೆ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು 64.75 ಕೋಟಿ ರೂ.ಗಳ ಅನುದಾನವನ್ನು ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 106 ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) 1. ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ 94-95ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದ ರೂ.258.10 ಲಕ್ಷ ಅನುದಾನದಲ್ಲಿ 82 ರಸ್ತೆಗಳಲ್ಲಿ ಬರುವ 140 ಅಭಿವೃದ್ಧಿ ಕಾಮಗಾರಿಗಳಲ್ಲಿ 9 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

2. 1995-96ನೇ ಸಾಲಿನಲ್ಲಿ ಬಿಡುಗಡೆಗೊಳಿಸಿದ ರೂ. 396.35 ಲಕ್ಷ ಅನುದಾನದಲ್ಲಿ 106 ರಸ್ತೆಗಳಲ್ಲಿ ಬರುವ 250 ಅಭಿವೃದ್ಧಿ ಕಾಮಗಾರಿಗಳಲ್ಲಿ 79 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. 171 ಕಾಮಗಾರಿಗಳು ಪ್ರಗತಿಯಲ್ಲಿದೆ.

3. ರೂ.30.00 ಲಕ್ಷ ಮೊತ್ತದ ಪ್ರತಿ ವಿಧಾನಸಭಾ ಕ್ಷೇತ್ರದ ರಸ್ತೆ ಕಾಮಗಾರಿಗಳು ವರ್ಷದ ಕೊನೆಯ ಭಾಗದಲ್ಲಿ ಮಂಜೂರಾಗಿದ್ದು, ಇವುಗಳಿಗೆ